**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 2232/2021**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ 24.03.2025**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಹೆಚ್ ವಕೀಲರಿಂದಃ**

ದಿಃ 20.01.2021 ರಂದು ಆರೋಪಿಗೆ 10 ಲಕ್ಷ ರೂ ಹಣ ನೀಡಿರುತ್ತೇನೆ. ಈ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿದ್ದೇನೆ. ಈ ವಿಚಾರ ಮತ್ತು ದಿನಾಂಕವನ್ನು ನನ್ನ ನೋಟೀಸ್ನಲ್ಲಿ ಮತ್ತು ಪಿರ್ಯಾದಿಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಈ ರೀತಿ ದಿನಾಂಕವನ್ನು ನಾನು ಇವತ್ತೇ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ಲಕ್ಷ ರೂಗಳಲ್ಲಿ 500 ಮುಖಬೆಲೆಯ ನೋಟುಗಳು ಒಟ್ಟು 9 ಲಕ್ಷ ರೂಗಳು ಮತ್ತು 100 ರೂ ಮುಖಬೆಲೆಯ 1 ಲಕ್ಷ ರೂಗಳನ್ನು ಆರೋಪಿಗೆ ನೀಡಿದ್ದೇನೆ. 500 ರೂ ಮುಖಬೆಲೆಯ ನೋಟುಗಳ ತಲಾ 1 ಲಕ್ಷಗಳ ಕಟ್ಟಿನಂತೆ ಒಟ್ಟು 9 ಕಟ್ಟುಗಳನ್ನು ಆರೋಪಿಗೆ ನೀಡಿದ್ದೆನು. ಅದೇ ರೀತಿ 100 ರೂ ಮುಖಬೆಲೆಯ ತಲಾ 50 ಸಾವಿರ ರೂಗಳಂತೆ 2 ಕಟ್ಟುಗಳನ್ನು ಆರೋಪಿಗೆ ನೀಡಿದ್ದೆನು. ಸದರಿ ಹಣದಲ್ಲಿ ಸುಮಾರು 3,80,000/- ರೂಗಳನ್ನು ನನ್ನ ಗಂಡ ಹರಿಹರದ ಯೂನಿಯನ್ ಬ್ಯಾಂಕ್ ನಿಂದ ಬಿಡಿಸಿಕೊಂಡು ಬಂದಿದ್ದರು. ಉಳಿದ ನನ್ನ ತವರು ಮನೆಯಿಂದ ಬಂದ ಆಸ್ತಿಯ ಪಾಲಿನ ಹಣ. ನನ್ನ ಗಂಡ ಈಶ್ವರಪ್ಪ 3,80,000/- ರೂಗಳನ್ನು ಬಿಡಿಸಿಕೊಂಡು ಬಂದ ನಿಖರವಾದ ದಿನಾಂಕ, ತಿಂಗಳು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ದಾಖಲೆಗಳನ್ನು ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಬಿಡಿಸಿಕೊಂಡು ಬಂದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸರಿ. 2020 ರಲ್ಲಿ ನನ್ನ ತವರು ಮನೆಯ ಆಸ್ತಿಯಲ್ಲಿ ವಿಭಾಗವಾಗಿರುತ್ತದೆ. ಸದರಿ ಸಂದರ್ಭದಲ್ಲಿ 5 ಲಕ್ಷ ರೂಗಳನ್ನು ನನ್ನ ಹಿಸ್ಸೆಗೆ ನೀಡಿರುತ್ತಾರೆ. ಈ ಪಾಲು ವಿಭಾಗದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ 10 ಲಕ್ಷ ರೂ ಹಣ ನೀಡಿದ ಬಗ್ಗೆ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ನನ್ನ ಮಗನ ತರಹ ಇದ್ದುದರಿಂದ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ತವರು ಮನೆಯವರನ್ನು ಪಾಲು ವಿಭಾಗ ಆದ ಬಗ್ಗೆ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ತವರು ಮನೆಯ ಪಾಲು ವಿಭಾಗದಲ್ಲಿ ನನಗೆ 5 ಲಕ್ಷ ರೂ ಹಣ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು 5 ಲಕ್ಷ ರೂ ಹಣವನ್ನು ನನಗೆ ನಗದು ರೂಪದಲ್ಲಿ ನೀಡಿರುತ್ತಾರೆ. ಸದರಿ ಹಣವನ್ನು ಯಾವ ಮೂಲದಿಂದ ನಿಮಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಣ್ಣ ತಮ್ಮಂದಿರು ಅಡಿಕೆ ಬೆಳೆಯುತ್ತಾರೆ, ವ್ಯವಸಾಯ ಮಾಡುತ್ತಾರೆ ಅದರಿಂದ ಬಂದ

ಹಣವನ್ನು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪಾಲು ವಿಭಾಗದಿಂದ ಬಂದ ಹಣವನ್ನು ಆರೋಪಿಗೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ10 ಲಕ್ಷ ರೂ ಹಣವನ್ನು ವ್ಯಾಪಾರ ಪ್ರಾರಂಭ ಮಾಡುವುದಕ್ಕಾಗಿ ಪಡೆದುಕೊಂಡಿರುತ್ತಾರೆ. ಸದರಿ ವ್ಯಾಪಾರ ಎಂದರೆ ಅಂಗಡಿ ಹಾಕಲು ಮತ್ತು ಅಪಾರ್ಟಮೆಂಟ್ ಗಳನ್ನು ಲೀಜಗೆ ನೀಡಲು ಹಣವನ್ನು ಪಡೆದಿರುತ್ತಾರೆ. ಸದರಿ ಅಂಗಡಿಯನ್ನು ಆರೋಪಿ ಬೆಂಗಳೂರಿನ ಬೆಳಂದೂರಿನಲ್ಲಿ ಪ್ರಾರಂಭಿಸಿರುತ್ತಾರೆ. ಸಾಕ್ಷಿಗೆ 2 ಛಾಯ ಚಿತ್ರಗಳನ್ನು ತೋರಿಸಲಾಗಿ ಸದರಿ ಛಾಯ ಚಿತ್ರಗಳಲ್ಲಿ ಕಾಣುತ್ತಿರುವ ಅಂಗಡಿ ಆರೋಪಿ ಪ್ರಾರಂಭಿಸಿದ ಅಂಗಡಿ ಎಂದರೆ ಸರಿ ಎಂದು ಒಪ್ಪಿದ್ದರಿಂದ ಅವುಗಳನ್ನು ಮುಖಾಬಿಲೆಯಾಗಿ ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೊಂದಿಗೆ ಹಣದ ವ್ಯವಹಾರ ಮಾಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯ ಸಹೋದರಿ ಕೋಕಿಲಾ ಎನ್ನುವವರಿಗೆ ಸಹ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಇವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಣ ನೀಡಿಲ್ಲ. ಕೂೕಕಿಲಾ ಆರೋಪಿಯ ತಂಗಿ. ಸದರಿ ಕೋಕಿಲಾ ಅವರಿಗೆ ನಾನು ಅವರ ಮದುವೆ ಕಾಲಕ್ಕೆ 2 ಲಕ್ಷ ರೂ ಹಣವನ್ನು ನೀಡಿರುತ್ತೇನೆ. ಸದರಿ ವ್ಯವಹಾರ ಸುಮಾರು 4 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ಹಣವನ್ನು ನಾನು ಫೋನ್ ಪೇ ಮುಖಾಂತರ ಕಳುಹಿಸುತ್ತಿದ್ದೆನು. ಸದರಿ ಹಣಕ್ಕೆ ಅವರು ಬಡ್ಡಿಯನ್ನು ನೀಡಿಲ್ಲ. ನಾನು ಬಡ್ಡಿಗೆ ಹಣವನ್ನು ನೀಡಿಲ್ಲ. ಈ ರೀತಿ 2 ಲಕ್ಷ ರೂಗಳನ್ನು ಫೋನ್ ಪೇ ಮಾಡಿದ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸರಿ. ಆರೋಪಿಗೆ 10 ಲಕ್ಷ ರೂ ನೀಡಿದ ಬಗ್ಗೆ ನಾನು ಸ್ವತಃ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ. ಆರೋಪಿಗೆ ಹಣವನ್ನು ನನ್ನ ಮನೆಯಲ್ಲಿ ನೀಡಿರುತ್ತೇನೆ. ಸದರಿ ಸಂದರ್ಭದಲ್ಲಿ ನಾನು ಮತ್ತು ನನ್ನ ಗಂಡ ಇದ್ದೆವು. ನಿಮ್ಮ ಗಂಡ ಈಶ್ವರಪ್ಪನನ್ನು ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರು ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಅವರು ಆರೋಗ್ಯವಂತರಾದ ನಂತರ ಮಾಡಿಸುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ಹಣವನ್ನು ನೀಡಿದಾಗ ಮದ್ಯಾಹ್ನ ಸುಮಯ 12.00 ಗಂಟೆಯಾಗಿತ್ತು. ಆರೋಪಿಗೆ ಹಣ ನೀಡುವ ಸಂದರ್ಭದಲ್ಲಿ ಯಾರಾದರೂ ಹಿರಿಯ ಮಧ್ಯಸ್ಥಿಕೆದಾರರನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿ ಮತ್ತು ನಮ್ಮ ಸಂಬಂದ ಚೆನ್ನಾಗಿ ಇತ್ತು ಆದ್ದರಿಂದ ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ.

ನನ್ನ ಮಗಳ ಹೆಸರು ಆಶಾ. ಸದರಿಯವರು ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ. ನಾನು 3,80,000/- ರೂಗಳನ್ನು ನನ್ನ ಗಂಡ ಬ್ಯಾಂಕಿನಿಂದ ತಂದ ಬಗ್ಗೆ ಮತ್ತು 5 ಲಕ್ಷ ರೂ ನನ್ನ ತವರು ಮನೆಯಿಂದ ಬಂದ ವಿಚಾರಗಳನ್ನು ನೋಟಿಸ್ ಮತ್ತು ಪಿರ್ಯಾದಿಯಲ್ಲಿ ಹೇಳಿಲ್ಲ ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2012 ರಿಂದ ಕೋವಿಡ್ ವರೆಗೂ ನಾನು ಅನ್ನಪೂರ್ಣ ಗಾರ್ಮೆಂಟ್ಸ ನ್ನು ನಡೆಸುತ್ತಿದ್ದೆನು. ಕೋವಿಡ್ ಸಂದರ್ಭದಲ್ಲಿ ಅದನ್ನು ಮುಚ್ಚಿರುತ್ತೇವೆ. ಪ್ರಸ್ತುತ ನಾನು ಏನೂ ಕೆಲಸ ಮಾಡುತ್ತಿಲ್ಲ. ನನ್ನ ಟೈಲರಿಂಗ್ ವ್ಯವಹಾರದ ಯಾವುದೇ ದಾಖಲೆಗಳನ್ನು ಇಟ್ಟಿಲ್ಲ. ಬಟ್ಟೆ ಹೊಲಿಯುವುದು ಮತ್ತು ಅದರಲ್ಲಿ ಬಂದ ಹಣವನ್ನು

ಪಡೆಯುವುದು ಮಾತ್ರ ಮಾಡುತ್ತಿದ್ದೆನು. ಈ ರೀತಿ ನನಗೆ ಆದಾಯ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ನಗರಸಭೆಯಲ್ಲಿ ನೀರು ಬಿಡುವ ಕೆಲಸ ಮಾಡುತ್ತಿದ್ದರು. ಸದರಿಯವರಿಗೆ ಎಷ್ಟು ಆದಾಯ ಇತ್ತು ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ಗಂಡನಿಗೆ ತಿಂಗಳಿಗೆ 50 ಸಾವಿರ ರೂ ಸಂಬಳ ಇದೆ. ನನಗೆ 2020 ರ ಪೂರ್ವದಲ್ಲಿ ತಿಂಗಳಿಗೆ 20 ರಿಂದ 25 ಸಾವಿರ ರೂ ಆದಾಯ ಇತ್ತು. ಈ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿಯು ನನ್ನ ಗಂಡನಿಗೆ ಸಂಬಳ ತೆರಿಗೆ ಕಡಿತವಾಗಿ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಯಾವುದೇ ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

ನಿಪಿ.1 ನ್ನು ಕರ್ನಾಟಕ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ನಿಪಿ.1 ನ್ನು ಬ್ಯಾಂಕಿಗೆ ಹಾಜರುಪಡಿಸಿದ ಬ್ಯಾಂಕ್ ಚಲನ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಿಪಿ.1 ರಲ್ಲಿರುವ ಬರವಣಿಗೆ ಆರೋಪಿಗೆ ಸಂಬಂದಿಸಿದ್ದಲ್ಲ ಎಂದರೆ ಸಾಕ್ಷಿಯು ಆರೋಪಿಯೇ ಬರೆಸಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಸಹಿ ಮಾಡಿದ ಖಾಲಿ ಚೆಕ್ ನ್ನು ನಮ್ಮ ಇಚ್ವಾನುಸಾರ ಭರ್ತಿ ಮಾಡಿ ಬ್ಯಾಂಕಿಗೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನಮೂದಿಸಿದ ಮೊತ್ತಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಬ್ಯಾಂಕಿಗೆ 2 ಬಾರಿ ಹೋಗಿದ್ದೆನು. ನಿಪಿ.1 ನ್ನು ಬ್ಯಾಂಕಿಗೆ 2 ಬಾರಿ ನಗದೀಕರಣಕ್ಕೆ ಸಲ್ಲಿಸಿರುತ್ತೇನೆ. ನನ್ನ ನೋಟಿಸ್ ಮತ್ತು ಪಿರ್ಯಾದಿಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ